ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. ನಾವು ಬಹಳ ಮಹತ್ವದ ಪ್ರಶ್ನೆ ಕೇಳಿದ್ದೇವೆ. ಇಲ್ಲಿ ಪ್ರಶ್ನೆ ಕೇಳುವ ಮೊದಲು ಬಹಳ ತಯಾರು ಮಾಡಿಕೊಂಡು ನಾವು ಎಲ್ಲಿ ಕೊಡಿದ್ದರೆ ಏನೇನು ಮಾಡಬಹುದು ಎಂಬ ಪರಿಜ್ಞಾನ ಇಟ್ಟುಕೊಂಡು ಮಾತನಾಡಿದ್ದೇವೆ. ತಾವು ನಮಗೆ ಪ್ರೊಟೆಕ್ಷನ್ ಕೊಡಬೇಕು. ಬರೀ ನಾವು ೨೪ ಜನರಿದ್ದೇವೆ, ಆದರೆ ಬಹಳ ಮಹತ್ವದ ವಿಷಯಗಳು.....

ಅಧ್ಯಕ್ಷರು.—ಕ್ಲಾರಿಫಿಕೇಷನ್‌ಗೇ ಆಂತ ಎಷ್ಟು ಟೈಮ್ ಕೊಡಬೇಕೆಂಬುದು ಇಲ್ಲಿ ಬಹಳ ಪ್ರಾಮುಖ್ಯವಾದ ಪ್ರಶ್ನೆ. ೧೦-೫೦ ನಿಮಿಷ ಬರೀ ಕ್ಲಾರಿಫಿಕೇಷನ್‌ಗೇ ಕೊಟ್ಟಿರೋದನ್ನು ನಾನೂ ಎಲ್ಲೂ ನೋಡಿಲ್ಲ. ಎಲ್ಲದಕ್ಕೂ ಒಂದು ಮಿತಿ ಇದೆ. ಇದೇ ರಾಷನಸಭೆಯು ಹಿಂದಿನ ಕಡತಗಳನ್ನು ಸ್ವಲ್ಪ ನೋಡಿ.

ಶ್ರೀ ಆರ್. ವಿ ದೇಶಪಾಂಡೆ.—ಕೊಟ್ಟಿದ್ದಾರೆ ಸಾರ್. ಡಿಪಾರ್ಟ್‌ಮೆಂಟ್ ಡಿಮ್ಯಾಂಡ್ ಮೇಲೆ ಕ್ಲಾರಿಫಿಕೇಷನ್‌ಗೆ ಒಂದೂವರೆ ಗಂಟೆ ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು.—೪೫ ಜನ ಮಾನ್ಯ ಸದಸ್ಯರು ಆಯವ್ಯಯದ ಮೇಲೆ ಮಾತನಾಡಿದ್ದಾರೆ. ಪ್ರತಿಯೊಬ್ಬ ಸದಸ್ಯರ ಪ್ರತಿ ಪಾಯಿಂಟ್‌ಗೂ ಅರ್ಥ ಮಂತ್ರಿಗಳು ಉತ್ತರ ಕೊಡಲಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಕಾವೇರಿ ನೀರನ್ನು ಚಾಮರಾಜನಗರಕ್ಕೆ ಯೂವಾಗ ಪೂರೈಸುವುದು ಎಂದು ಹೇಳಲಿ. ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು.—ಆಯಿತು. ವಾಟಾಳ್ ನಾಗರಾಜ್ ಅವರು ಕೇಳಿದ್ದಕ್ಕೆ ಸಚಿವರು ಏನಾದರೂ ಹೇಳಬಯಸುವರೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಏನೂ ಇಲ್ಲ ಸ್ವಾಮಿ.

ಅಧ್ಯಕ್ಷರು.—ವಾಟಾಳ್ ನಾಗರಾಜ್‌ರವರೇ ನೀವು ಕೈಮುಗಿದು ಅಂತಃಕರಣಪೂರ್ವಕವಾಗಿ ಕೇಳಿಕೊಂಡರೂ ಸಚಿವರು ಉತ್ತರ ಕೊಡಲಿಲ್ಲ.

ಶ್ರೀ ಹರ್ಷಕುಮಾರಗೌಡ.—ಅರ್ಥ ಸಚಿವರು ೧೩೫ ಕೋಟಿ ರೂಪಾಯಿಗಳನ್ನು ಪಟ್ಟಣ ಅಭಿವೃದ್ಧಿಗಾಗಿ ವಿೂಸಲಾಗಿಟ್ಟಿದ್ದಾರೆ. ನಾನು ಪ್ರಾರ್ಥಿಸುವುದೇನೆಂದರೆ ಪಟ್ಟಣಗಳಿಗೆ ನೀರು ಒದಗಿಸುವ ಕಾರ್ಯವನ್ನು ಬೇಸಿಗೆಯಿರುವುದರಿಂದ ನಿಧಾನವಾಗಬಾರದು. ಆದ್ದರಿಂದ ಇದರ ಬಗ್ಗೆ ಸಚಿವರು ಕ್ಲಾರಿಫಿಕೇಷನ್ ಕೊಡಬೇಕು.

Sri M. Rajashekaramurthy.—There is no delay with regard to taking up decisions regarding drinking water supply. The Government will move quickly in the matter.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಮಾರ್ಚಿಯೊಳಗೇ ಚಾಮರಾಜ ನಗರಕ್ಕೆ ನೀರನ್ನು ಒದಗಿಸುತ್ತೇವೆಂದು ಹೇಳಿದ್ದರು. ಆದರೆ ಈಗ ಮೂಕರಾಗಿದ್ದಾರೆ. ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇನೆ.

(ಗದ್ದಲ)

ಇದು ಬಹಳ ಅನ್ಯಾಯ. ಇಡೀ ಚಾಮರಾಜನಗರ ಕಣ್ಣೀರು ಹಾಕುತ್ತಿದೆ. ಇದು ಅನ್ಯಾಯ. ನಮಗೆ ಕಾವೇರಿ ನೀರು ಬೇಕು.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

(ಈ ಹಂತದಲ್ಲಿ ಜನತಾ ದಳದ ಎಲ್ಲಾ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು. ಗೊಂದಲವುಂಟಾಯಿತು)

ಶ್ರೀ ಹರ್ಷಕುಮಾರ್‌ಗೌಡ.—ಅರ್ಥ ಸಚಿವರಿಗೆ ವಾಟಾಳರು ಧನ್ಯವಾದಗಳನ್ನು ಹೇಳಬೇಕು. ನಿಮ್ಮ ಕಡೆಗೆ ಆರೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ರಮಾನಾಥರೈ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹು ಭಾಗದ ಜನ ಬೀಡಿ ಉದ್ದಿಮೆಯನ್ನು ನಂಬಿಕೊಂಡು ಬದುಕುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಈ ಬೀಡಿ ಉದ್ಯಮಕ್ಕೆ ಬಹಳ ಗಂಭೀರ ಪರಿಸ್ಥಿತಿಯುಂಟಾಗಿದೆ. ವಾರದಲ್ಲಿ ಎರಡು ದಿವಸ ಮಾತ್ರ ಕೆಲಸ ಮಾಡಲಕ್ಕೆ ಸಾಧ್ಯ